Com.O.S. 39/2024
DW-1

ಸಾಕ್ಷಿಯನ್ನು ಈ ದಿನ ದಿನಾಂಕ **19.02.2026** ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಬಿ ಎಸ್ ಕೆ ವಕೀಲರಿಂದಃ ವಾದಿಯ ಪರವಾಗಿಃ

**1.** ವಾದಿ ಬ್ಯಾಂಕನಲ್ಲಿ ನೀವು ಎಷ್ಟು ವರ್ಷಗಳಿಂದ ವ್ಯವಹಾರ ಮಾಡುತ್ತಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಯಾವುದೇ ವ್ಯವಹಾರ ಮಾಡಿಲ್ಲ ಮತ್ತು ನನ್ನ ಯಾವುದೇ ಖಾತೆ ಇರುವುದಿಲ್ಲ ಎನ್ನುತ್ತಾರೆ. ಕಸ್ತೂರಿ ಬಸವರಾಜ ಸಂಕನಗೌಡರ ನನ್ನ ಗಂಡನ ಅಣ್ಣನ ಹೆಂಡತಿ. ಅವರು ರೊಟ್ಟಿ ತಯಾರಿಸುವ ಮಶಿನನ್ನು ಮಾರಾಟ ಮಾಡುವ ವ್ಯವಹಾರ ಮಾಡುತ್ತಾರೆ. ನಾನು **2022** ನೇ ಸಾಲಿನಲ್ಲಿ ಅವರಿಂದ ಒಂದು ಮಶೀನನ್ನು ಖರೀದಿ ಮಾಡುವ ಬಗ್ಗೆ ರೂ.**15,00,004/-** ಒಂದು ಕೊಟೇಶನನ್ನು ಪಡೆದುಕೊಂಡು ಅದನ್ನು ವಾದಿ ಬ್ಯಾಂಕ್ ಖಾತೆಗೆ ಹಾಜರು ಪಡಿಸಿ, ಸಾಲಕ್ಕಾಗಿ ಅರ್ಜಿ ಕೊಟ್ಟಿದ್ದೆ ಎನ್ನುವುದು ನಿಜವಲ್ಲ.

**2.** ನಾನು ನನ್ನ ನೆಗೆಣ್ಣೆ ಅಂದರೆ ಕಸ್ತೂರಿ ಬಸವರಾಜ ಸಂಕನಗೌಡರ ವಿರುದ್ಧ ಬೆಳಗಾವಿಯ ಗ್ರಾಹಕರ ವೇದಿಕೆಯಲ್ಲಿ ರೊಟ್ಟಿ ತಯಾರಿಸುವ ಮಶೀನಗೆ ಸಂಬಂಧಪಟ್ಟಂತೆ ಒಂದು ಕೇಸನ್ನು ದಾಖಲು ಮಾಡಿದ್ದೆ. ಅದೇ ಕೇಸನಲ್ಲಿ ನಾನು ವಾದಿ ಬ್ಯಾಂಕನ್ನು ಪಕ್ಷಗಾರರನ್ನಾಗಿ ಮಾಡಿದ್ದೆನು. ಆ ಅರ್ಜಿಯಲ್ಲಿ ನಾನು ಬ್ಯಾಂಕನಿಂದ ಸಾಲ ಪಡೆದು, ಖರೀದಿ ಮಾಡಿದ ಮಶೀನ್ ಸರಿ ಇಲ್ಲ ಎಂದು ಆಪಾದಿಸಿದ್ದೆ ಎನ್ನುವುದು ನಿಜ.

**3.** ನಾಗಪ್ಪಾ ಅಂದರೆ ನನ್ನ ಗಂಡ. ನಿಪಿ-**11** ಅಂಚೆ ಹಿಂಬರಹದಲ್ಲಿ ನನ್ನ ಗಂಡನ ಸಹಿ ಇದೆ ಎನ್ನುವುದು ನಿಜವಲ್ಲ. ವಾದಿ ಬ್ಯಾಂಕನವರು ಕಳುಹಿಸಿದ ನೋಟಿಸ್ಸು ನಮಗೆ ಜಾರಿಯಾಗಿದೆ ಎನ್ನುವುದು ನಿಜವಲ್ಲ. ಸಾಲದ ಹಣ ಮೊದಲು ನನ್ನ ನೆಗೆಣ್ಣೆಯ ಖಾತೆಗೆ ಹೋಗಿ ಆಬಳಿಕ ನಮ್ಮ ಖಾತೆಗೆ ಜಮಾ ಆಗಿದೆ ಎನ್ನುವುದು ನಿಜವಲ್ಲ.

Com.O.S. 39/2024
DW-1

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಕೇಳಿ, ಅವರು ಹೇಳಿದಂತೆಯೇ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಕೊಂಡು, ನಂತರ ಓದಿ ಹೇಳಲಾಯಿತು ಎಂದು ಈ ಮೂಲಕ ಪ್ರಮಾಣಿಕರಿಸಲಾಗಿದೆ ).

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.